ಪರಿಹಾರ ಕಾಣಿಸುತ್ತಿಲ್ಲ. ಅವರ ಶಿಕ್ಷಣವೊಮ್ಮೆ ಮುಗಿದರೆ ಸಾಕು. ನನಗೆ ಈ ಇಮಾಜುಗಳ ಉಸಾಬರಿಯೇ ಬೇಡ ಸ್ವಾಮಿ.''

ಬಿವ್ವಿಸನ ಮಾತುಗಳನ್ನು ಕೇಳಿ ಪೂಜ್ಯ ಗುರುಗಳು ನಗೆಯಾಡಿದರು. ವ್ಯಂಗ್ಯದಿಂದ ಅಲ್ಲದಿದ್ದರೂ ಬಿವ್ವಿಸನ ಮುಗ್ಧತೆಯನ್ನು ಹೀಯಾಳಿಸುವಂತಹ ಕುಹಕ ನಗೆ.

''ಸಂತ ಭಕ್ತರ ಇಮಾಜುಗಳ ಮುಂದೆ ಅಡ್ಡಬಿದ್ದಾಕ್ಷಣ ದೇವರು ನಿನ್ನ ಮೇಲೆ ಪ್ರಸನ್ನಗೊಳ್ಳುತ್ತಾನೆಂದು ಅಂದುಕೊಂಡಿದ್ದೀಯ ಬಿವ್ವಿಸ!?... ಮತ್ತೊಮ್ಮೆ ನಿನಗೆ ಹೇಳುತ್ತಿದ್ದೇನೆ ಕೇಳು ಬಿವ್ವಿಸ, ನೀನು ಮಾಡುತ್ತಾ ಮಾರುತ್ತಿರುವುದು ಮಣ್ಣಿನ ಮೂರ್ತಿಗಳ ವ್ಯಾಪಾರವಷ್ಟೇ. ದೇವರನ್ನಲ್ಲ! ಇದು ದೇವರು ಇಷ್ಟಪಡದ ಬರೇ ದುಡ್ಡಿನ ವ್ಯವಹಾರವಷ್ಟೇ! ದೇವರು ನಮ್ಮ ಹೃದಯದಲ್ಲಿರುತ್ತಾನೆ. ನಮ್ಮ ಹೃದಯ ಪರಿಶುದ್ಧವಾಗಿದ್ದರೆ ಮಾತ್ರ ದೇವರು ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆ. ಬಿವ್ವಿಸ, ಇದು ನಾನು ನಿನಗೆ ಕೊಡುತ್ತಿರುವ ಕೊನೆಯ ಎಚ್ಚರಿಕೆ. ನೀನು ದೇವರನ್ನಾದರೂ ಮಾರು, ಇಮಾಜುಗಳನ್ನಾದರೂ ಮಾರು. ಈ ತಿಂಗಳು ಮುಗಿಯುವುದರೊಳಗೆ ಶಾಲಾ ಶುಲ್ಕವನ್ನು ಕಟ್ಟದಿದ್ದಲ್ಲಿ ನಿನ್ನ ಮಕ್ಕಳನ್ನು ಸರಕಾರಿ ಸ್ಕೂಲಿಗೆ ಸೇರಿಸು.''

ಅಷ್ಟರಲ್ಲಿ ಗುರುಗಳ ಅಡುಗೆಯವನು ಸಂಜೆಯ ಕಾಫಿ, ತಿಂಡಿ ತಯಾರಾಗಿದೆ ಎಂದು ಹೇಳುವುದರೊಂದಿಗೆ ಅವರ ಮಧ್ಯದ ಸಂಭಾಷಣೆ ಕೊನೆಗೊಂಡಿತು.

ಗುರುಗಳು ಎದ್ದು ಒಳನಡೆದರು. ಬಿವ್ವಿಸ ಮತ್ತೊಮ್ಮೆ ತನ್ನ ಗೋಳನ್ನು ತೋಡಿಕೊಂಡನಾದರೂ ಅದು ಗುರುಗಳ ಕಿವಿಗಳಿಗೆ ತಲುಪಲಿಲ್ಲ. ಗುರುಗಳು ಒಳಗೆ ಹೋಗುತ್ತಿದ್ದಂತೆ ಬಾಗಿಲನ್ನೂ ಮುಚ್ಚಿದರು.

★★★

ಬಿವ್ವಿಸ ಇಗರ್ಜಿಯ ಗುರುಗಳನ್ನು ಭೇಟಿ ಮಾಡಿ ಮನೆಗೆ ಬಂದಾಗ ದಿನಸಿ ಅಂಗಡಿಯ ಸುಧಾಕರ ಗೇಟಿನ ಹೊರಗಡೆ ಬೈಕನ್ನು ನಿಲ್ಲಿಸಿ ಅವನ ಹಾದಿಯನ್ನು ಕಾಯುತ್ತಿದ್ದ. ಎಂದಿನಂತೆ ಅವನ ಕಂಕುಳ ಸಂದಿಯಲ್ಲಿ ಅಂಗಡಿಯ ಲೆಕ್ಕದ ಪುಸ್ತಕ ಕಾಣಿಸುತ್ತಿತ್ತು. ಅವನ ಮುಖ ಸಿಟ್ಟಿಂದ ಕಪ್ಪಿಟ್ಟಿತ್ತು. ಅಂಗಡಿ ಎಂದ ಮೇಲೆ ಸಾಲ ಕೊಡುವುದಿತ್ತು. ಹಾಗೆಯೇ ಬಾಕಿ ಇರಿಸಿಕೊಂಡವರಿಂದ ವಸೂಲಿಯೂ ನಡೆಯುತ್ತಿತ್ತು. ಬಿವ್ವಿಸ ಕಳೆದ ನಾಲ್ಕು ತಿಂಗಳುಗಳಿಂದ ಮನೆಗೆ ದಿನಸಿ ತಂದಿದ್ದ ಸಾಲವನ್ನು ಬಾಕಿ ಇರಿಸಿಕೊಂಡಿದ್ದ.

ಸುಧಾಕರ ಕಡ ತಂದಿದ್ದ ಸಾಮಾನುಗಳ ಲೆಕ್ಕವನ್ನು ತುಂಬಾ ಸರಳವಾಗಿ ನಿಭಾಯಿಸುತ್ತಿದ್ದ. ಕಡ ತರುವವರ ಬಳಿ ಒಂದು ಸಣ್ಣ ಪುಸ್ತಕವಿರುತ್ತಿತ್ತು. ಕಡ ತಂದಿರುತ್ತಿದ್ದ ಸಾಮಾನುಗಳ ಲೆಕ್ಕ ಅದರಲ್ಲಿ ನಮೂದಾಗುತ್ತಿತ್ತು. ಅಂಗಡಿಗೆ ಸಾಮಾನಿಗೆಂದು ಹೋದಾಗಲೆಲ್ಲಾ ಅದನ್ನು ಜತೆಯಲ್ಲಿ ಒಯ್ಯಬೇಕಾಗುತ್ತಿತ್ತು. ಸುಧಾಕರನ ಬಳಿಯೂ ಅದರ ಲೆಕ್ಕವಿರುತ್ತಿತ್ತು.

ಮೀನು, ಮಾಂಸ ಬಿಟ್ಟು ಮನೆ ಬಳಕೆಗೆ ಬೇಕಾದ ಇತರೆ ವಸ್ತುಗಳೆಲ್ಲಾ ಸುಧಾಕರನ ಅಂಗಡಿಯಲ್ಲಿ ಸಿಗುತ್ತಿದ್ದವು.

ಕಳೆದ ಕೆಲವು ದಿನಗಳಿಂದ ಸಾಮಾನು ತೆಗೆದುಕೊಂಡು ಹೋಗಲು ಬರುತ್ತಿದ್ದ ಬಿವ್ವಿಸನ ಮನೆಯವರಿಂದ ಸಾಲ ತೀರಿಸುವ ಬಗ್ಗೆ ಕೇಳಿ ಕೇಳಿ ಸುಧಾಕರ ರೋಸಿ ಹೋಗಿದ್ದ. ಸುಧಾಕರ ಇಂದು ಗಲ್ಲದ ಮೇಲೆ ತಮ್ಮನನ್ನು ಕೂರಿಸಿ ಸಾಲ ವಸೂಲಿ ಮಾಡಿಯೇ ತೀರುವ ಉದ್ದೇಶದಿಂದ ಬಿವ್ವಿಸನ ಮನೆಗೆ ಬಂದಿದ್ದ.

ಗುರುಗಳ ಕಠೋರ ಎಚ್ಚರಿಕೆಯ ಮಾತುಗಳಿಂದ ವಿಚಲಿತನಾಗಿ ಮನೆಗೆ ಬಂದ ಬಿವ್ವಿಸನಿಗೆ ಸುಧಾಕರನ ಕಪ್ಪಿಟ್ಟ ಮುಖ ಕಂಡು ದಿಗಿಲಾಯಿತು.